ಕರ್ನಾಟಕ ಸರ್ಕಾರ

ಸಂ:ನಅಇ 08 ಟಿಟಿಪಿ 2013

ಕರ್ನಾಟಕ ಸರ್ಕಾರ ಸಚಿವಾಲಯ
ವಿಕಾನ ಸೌಧ,
ಬೆಂಗಳೂರು ದಿನಾಂಕ: 24.05.2014.

ಸುತ್ತೋಲೆ

ವಿಷಯ: ಖಾಸಗಿ ವಿನ್ಯಾಸ ಅನುಮೋದನೆ ಅಭಿವೃದ್ಧಿಪಡಿಸುವಿಕೆ ಮತ್ತು ವಿನ್ಯಾಸಗಳಲ್ಲಿಯ ನಿವೇಶನಗಳನ್ನು ಬಿಡುಗಡೆಗೊಳಿಸುವ ಕುರಿತು ಅನುಸರಿಸಬೇಕಾದ ವಿಧಿ ವಿಧಾನಗಳು.

ಉಲ್ಲೇಖ: 1. ಸರ್ಕಾರದ ಸುತ್ತೋಲೆಯ ಕ್ರಸಂ: ನಅಇ/104(1)/ಬೆಂರೂಪ್ರಾ/2005, ದಿ:09-05-2005.
2. ಸರ್ಕಾರದ ಸುತ್ತೋಲೆಯ ಕ್ರಸಂ: ನಅಇ/104(2)/ಬೆಂಯೂಪ್ರ/2005, ದಿ:09-05-2005.
3. ಸರ್ಕಾರದ ಸುತ್ತೋಲೆಯ ಕ್ರಸಂ: ನಅಇ/104(3)/ಬೆಂರೂಪ್ರಾ/2005, ದಿ:09-05-2005.
4. ಸರ್ಕಾರದ ಸುತ್ತೋಲೆಯ ಕ್ರಸಂ: ನಅಇ/104(4)/ಬೆಂರೂಪ್ರಾ/2005, ದಿ:09-05-2005.
5. ಸರ್ಕಾರದ ಅಧಿಸೂಚನೆಯ ಕ್ರಸಂ:ಆರ್ಡಿ/174/ಮುನಮು/2005, ದಿ:23-04-2005.
6. ಸರ್ಕಾರದ ಸುತ್ತೋಲೆಯ ಕ್ರಸಂ: ನಅಇ/112/ಬೆಂರೂಪ್ರಾ/2005, ದಿ:26-05-2005.
7. ಸರ್ಕಾರದ ಸುತ್ತೋಲೆಯ ಕ್ರಸಂ: ನಅಇ/599/ಮೈಅಪ್ರಾ/2012, ದಿ:03-12-2012.

ಸಂಖ್ಯೆ	
ದಿನಾಂಕ	27/5/14
ಸ. ಇ.	
ಇ.ಪಿ.	
ಸ. ಕಿ.	

*****

ಅನೇಕ ಸಂದರ್ಭಗಳಲ್ಲಿ, ವಿನ್ಯಾಸ ಮಾಲೀಕರು/ ಅಭಿವೃದ್ಧಿದಾರರು ಈಗಾಗಲೇ ಹೊರಡಿಸಿರುವ ಉಲ್ಲೇಖಿತ ಸುತ್ತೋಲೆಗಳ ಸೂಚನೆಗಳನ್ನು ಪೂರ್ಣ ಪ್ರಮಾಣದಲ್ಲಿ ಪಾಲಿಸದೇ ವಿನ್ಯಾಸ ಅಭಿವೃದ್ಧಿ ಕಾರ್ಯಗಳು ಕುಂಟಿತಗೊಂಡಿರುವ ಉದಾಹರಣೆಗಳೊಂದಿಗೆ ಮಾನ್ಯ ಕರ್ನಾಟಕ ಲೋಕಾಯುಕ್ತಕ್ಕೆ ಸಾರ್ವಜನಿಕರಿಂದ ಬಂದಿದ್ದಂತಹ ದೂರುಗಳ ಹಿನ್ನೆಲೆಯಲ್ಲಿ ಅಭಿವೃದ್ಧಿಪಡಿಸಿದ ವಿನ್ಯಾಸಗಳ ವಸ್ತುಸ್ಥಿತಿಯನ್ನು ಅವಲೋಕಿಸಿದಾಗ, ಖಾಸಗಿ ವಿನ್ಯಾಸಗಳನ್ನು ನಿಗಧಿತ ಅವಧಿಯೊಳಗೆ ಮೂಲಭೂತ ಸೌಕರ್ಯಗಳಾದ ರಸ್ತೆ, ನೀರು ಸರಬರಾಜು, ಒಳಚರಂಡಿ, ವಿದ್ಯುತ್ ಸಂಪರ್ಕ ಸೇರಿದಂತೆ ಉದ್ಯಾನವನ/ ಸಾರ್ವಜನಿಕ ಉಪಯೋಗದ ಜಾಗಗಳನ್ನು ವಿನ್ಯಾಸದ ಮಾಲೀಕರು/ ಅಭಿವೃದ್ಧಿದಾರರು ಅಭಿವೃದ್ಧಿಪಡಿಸದೇ ಇರುವುದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗಿರುವುದು ಕಂಡುಬಂದಿರುತ್ತದೆ. ಆದ್ದರಿಂದ ವಿನ್ಯಾಸದ ಮಾಲೀಕರು/ ಅಭಿವೃದ್ಧಿದಾರರಿಗೆ ನಿವೇಶನಗಳ ಬಿಡುಗಡೆಯ ಶೇಕಡಾವಾರು (40%, 30%, 30%) ಪದ್ಧತಿಯನ್ನು ಯಥಾವತ್ತಾಗಿ ಉಳಿಸಿಕೊಂಡು, ವಿನ್ಯಾಸಗಳನ್ನು ಅಭಿವೃದ್ಧಿಪಡಿಸುವುದನ್ನು ನಿಯಂತ್ರಿಸುವ ಸಂಬಂಧ ಯೋಗ್ಯವಾದ ನಿರ್ಬಂಧಗಳೊಂದಿಗೆ (Reasonable Restriction) ಸುತ್ತೋಲೆಯನ್ನು ಇನ್ನಷ್ಟು ಬಲಪಡಿಸುವ ಕುರಿತು ಹಾಗೂ ಕೆ.ಟಿ.ಸಿ.ಪಿ. ಕಾಯ್ದೆ, 1961ರ ಕಲಂ 76(k) ರಡಿಯಲ್ಲಿ

..2

ಪ್ರಾಧಿಕಾರಗಳ ಸುಲಲಿತ ಕಾರ್ಯನಿರ್ವಹಣೆ ಸಂಬಂಧ ಸರ್ಕಾರದಿಂದ ಅಗತ್ಯ ಸೂಚನೆಗಳನ್ನು ನೀಡಲು ಅಧಿಕಾರ ಇರುವುದನ್ನು ಪರಿಗಣಿಸಿ ಪರಿಷ್ಕೃತ ಸುತ್ತೋಲೆ ಹೊರಡಿಸಲು ಕ್ರಮ ವಹಿಸಲಾಗಿದೆ.

ಮೇಲೆ (1) ರಿಂದ (4) ರ ಸುತ್ತೋಲೆಗಳಲ್ಲಿ ಖಾಸಗಿ ವಿನ್ಯಾಸಗಳ ಅನುಮೋದನೆ, ಅಭಿವೃದ್ಧಿಪಡಿಸುವಿಕೆ ಮತ್ತು ಅನುಮೋದಿತ ವಿನ್ಯಾಸಗಳಲ್ಲಿನ ನಿವೇಶನಗಳನ್ನು ಬಿಡುಗಡೆ ಮಾಡುವ ಕುರಿತು ವಿಧಾನವನ್ನು ವಿವರಿಸಲಾಗಿದೆ. ಸರ್ಕಾರ ಉಲ್ಲೇಖಿತ (5)ರ ಅಧಿಸೂಚನೆಯನ್ನು ಹೊರಡಿಸಿ ರಾಜ್ಯದಲ್ಲಿ ನಿವೇಶನಗಳನ್ನು ನೋಂದಣಿ ಮಾಡಲು ಅನುಸರಿಸಬೇಕಾದ ಕ್ರಮ ಮತ್ತು ನೋಂದಣಿ ಸಮಯದಲ್ಲಿ ನೋಂದಣಿ ಅಧಿಕಾರಿಗಳು ಪಡೆಯಬೇಕಾದ ದಾಖಲೆಗಳ ಕುರಿತು ಸಹ ನಿರ್ದೇಶನ ನೀಡಲಾಗಿದೆ. ಇದೇ ಸುತ್ತೋಲೆಯಲ್ಲಿ ವಿನ್ಯಾಸ ಅನುಮೋದನೆಯಾದ ನಂತರ ನಿವೇಶನ ಬಿಡುಗಡೆಯ ಕುರಿತು ಸ್ಥಳೀಯ ಯೋಜನಾ ಪ್ರಾಧಿಕಾರಗಳಿಂದ ದಾಖಲೆಗಳನ್ನು ಪಡೆದು ನಿವೇಶನಗಳನ್ನು ನೋಂದಾಯಿಸುವ ಬಗ್ಗೆ ಸೂಚನೆ ನೀಡಲಾಗಿದೆ. ಉಲ್ಲೇಖ (7)ರಲ್ಲಿ ನಿವೇಶನಗಳನ್ನು ಬಿಡುಗಡೆಗೊಳಿಸುವ ಬಗ್ಗೆ ಪರಿಷ್ಕೃತ ಮಾರ್ಗಸೂಚಿ ಒಳಗೊಂಡ ಸುತ್ತೋಲೆ ಹೊರಡಿಸಲಾಗಿರುತ್ತದೆ. ಆದಾಗ್ಯೂ ಮೇಲೆ ಓದಲಾದ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡ ಮಾರ್ಗಸೂಚಿಯನ್ನು ಅನುಸರಿಸಲು ನಗರಾಭಿವೃದ್ಧಿ ಪ್ರಾಧಿಕಾರಗಳು, ನಗರ ಯೋಜನಾ ಪ್ರಾಧಿಕಾರಗಳು ಮತ್ತು ರಾಜ್ಯದಲ್ಲಿಯ ಎಲ್ಲಾ ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶನ ನೀಡಲಾಗಿದೆ.

ಮೊದಲನೇ ಹಂತ:

- ಜಮೀನಿನ ಮಾಲೀಕರು/ ಅಭಿವೃದ್ಧಿದಾರರು ವಿನ್ಯಾಸ ಅನುಮೋದನೆಗಾಗಿ ಪ್ರಾಧಿಕಾರ ನಿಗಧಿಪಡಿಸಿದ ಅರ್ಜಿಯನ್ನು ಭರ್ತಿ ಮಾಡಿ ಎಲ್ಲಾ ದಾಖಲಾತಿಗಳೊಂದಿಗೆ ಸಲ್ಲಿಸತಕ್ಕದ್ದು.
- ವಿನ್ಯಾಸ ಅನುಮೋದನೆಗೆ ಅರ್ಜಿ ಸ್ವೀಕರಿಸಿದ ನಂತರ ಅರ್ಜಿಯೊಂದಿಗೆ ಸಲ್ಲಿಸಿರುವ ದಾಖಲಾತಿ ಗಳನ್ನು ಪರಿಶೀಲಿಸಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಡಿಯಲ್ಲಿ ಸರ್ಕಾರದಿಂದ ಅನುಮೋದನೆಗೊಂಡಿರುವ ಜಾಲ್ತಿ ಮಹಾಯೋಜನೆ ಮತ್ತು ವಲಯ ನಿಯಮಾವಳಿಗಳನ್ವಯ ಕರಡು ವಿನ್ಯಾಸ (Demarcation purpose) ರೂಪಿಸಿ ಪ್ರಾಧಿಕಾರದ ಸಭೆಯಲ್ಲಿ ಮಂಡಿಸುವುದು.
- ಪ್ರಾಧಿಕಾರದ ಸಭೆಯ ನಿರ್ಣಯ ಅನುಸರಿಸಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17(2) ರನ್ವಯ ಅನುಮೋದನೆ ನೀಡಿದ ನಂತರ ಯೋಜನಾ ಪ್ರಾಧಿಕಾರಗಳು, ಶಾಸನ ಬದ್ಧ ಶುಲ್ಕ ಭರಿಸಲು ನಿಗಧಿಪಡಿಸಿರುವ ನಿಯಮದಡಿಯಲ್ಲಿ ಲಿಖಿತ ಸೂಚನೆ ನೀಡುವುದು.
- Demarcation Plan ಅನ್ವಯ (ನಿವೇಶನಗಳ ವಿಂಗಡಣೆ ಇಲ್ಲದ ನಕ್ಷೆ) ಎಲ್ಲಾ ರಸ್ತೆ ಪರಿಚಲನೆಯನ್ನು ಯಥಾವತ್ತಾಗಿ ಭೂಮಿಯ ಮೇಲೆ ಅಳವಡಿಸಿ ಉದ್ಯಾನವನ/ ಬಯಲು ಜಾಗ ಮತ್ತು ನಾಗರೀಕ ಸೌಲಭ್ಯ ನಿವೇಶನದ ಗಡಿಗಳನ್ನು (Boundarie) ವಿನ್ಯಾಸದ ಅಳತೆಯನ್ವಯ ನಿಖರವಾಗಿ ಗುರ್ತಿಸಿ ಬೇಲಿ (Fencing) ನಿರ್ಮಿಸತಕ್ಕದ್ದು. ಅದರನ್ವಯ ವಿನ್ಯಾಸದ ಮಾಲೀಕರು/ ಅಭಿವೃದ್ಧಿದಾರರು ಉದ್ಯಾನವನ/ ಬಯಲು ಜಾಗ

..3

- ಮತ್ತು ನಾಗರೀಕ ಸೌಲಭ್ಯದ ನಿವೇಶನಗಳನ್ನು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ / ಸ್ಥಳೀಯ ಸಂಸ್ಥೆಗೆ ಪುಕ್ಕಟೆಯಾಗಿ ನೋಂದಾಯಿಸಿ ಹಸ್ತಾಂತರಿಸತಕ್ಕದ್ದು.
- ಪ್ರಾಧಿಕಾರದ ಸಭೆಯಲ್ಲಿ ಅನುಮೋದಿಸಿದ Demarcation ವಿನ್ಯಾಸ ನಕ್ಷೆಯಂತೆ ಅರ್ಜಿದಾರರು ಎಲ್ಲಾ ನಿವೇಶನಗಳನ್ನು ರಸ್ತೆ, ಉದ್ಯಾನವನ/ ಬಯಲುಜಾಗ, ನಾಗರೀಕ ಸೌಲಭ್ಯದ ನಿವೇಶನಗಳನ್ನು ಸ್ಥಳದಲ್ಲಿ ಗುರುತಿಸಿದ ನಕ್ಷೆಯಲ್ಲಿ ಒಳಚರಂಡಿ ವ್ಯವಸ್ಥೆ, ನೀರು ಸರಬರಾಜು, ವಿದ್ಯುಚ್ಛಕ್ತಿ ಸಂಪರ್ಕ, ಮಳೆ ನೀರು ಸಂಗ್ರಹಣೆ ವ್ಯವಸ್ಥೆಯನ್ನು ತೋರಿಸುವ ನಕ್ಷೆಯೊಂದಿಗೆ ಮೊದಲ ಹಂತದ ಶೇ.40 ರಷ್ಟು ನಿವೇಶನಗಳ ಬಿಡುಗಡೆಗಾಗಿ ಮನವಿ ಸಲ್ಲಿಸತಕ್ಕದ್ದು.
- ನಗರಾಭಿವೃದ್ಧಿ ಪ್ರಾಧಿಕಾರ/ ಸ್ಥಳೀಯ ಸಂಸ್ಥೆಯು ಉದ್ಯಾನವನ/ ಬಯಲು ಜಾಗ ಮತ್ತು ನಾಗರೀಕ ಸೌಲಭ್ಯದ ನಿವೇಶನಗಳನ್ನು ಹಸ್ತಾಂತರಿಸಿಕೊಂಡ ನಂತರ Demarcation Plan ಅನ್ವಯ ರಸ್ತೆ ಪರಿಚಲನೆಯನ್ನು ಭೂಮಿಯ ಮೇಲೆ ಅಳವಡಿಸಿರುವುದು ಖಾತರಿಯಾದಲ್ಲಿ Demarcated plan ನಂತೆ ಅವಶ್ಯವಿದ್ದಲ್ಲಿ ಪ್ರಾಧಿಕಾರವು ಕರಡು ವಿನ್ಯಾಸ ನಕ್ಷೆಯಲ್ಲಿ ವಲಯ ನಿಯಮಾವಳಿಗಳಿಗೆ ಅನುಗುಣವಾಗಿ ಭೂಮಿಯ ಮೇಲೆ ಅಳವಡಿಸಿದನ್ವಯ ಪರಿಷ್ಕರಣೆಗಳನ್ನು ಅಳವಡಿಸಿಕೊಂಡು ಕರಡು ವಿನ್ಯಾಸ ನಕ್ಷೆಯನ್ನು ಅಂತಿಮಗೊಳಿಸಿ, ನಿವೇಶನಗಳನ್ನು ವಿಂಗಡಿಸಿ ಒಟ್ಟು ಲಭ್ಯವಾಗುವ ನಿವೇಶನಗಳ ಪೈಕಿ ಶೇ.40 ರಷ್ಟು ನಿವೇಶನಗಳನ್ನು ವಿನ್ಯಾಸದ ಬೇರೆ ಬೇರೆ ಭಾಗಗಳಲ್ಲಿ ಮೂಲೆ ನಿವೇಶನಗಳನ್ನು ಒಳಗೊಂಡಂತೆ ಪ್ರಾರಂಭಿಕ ಹಂತದಲ್ಲಿ ನಮೂನೆ I ರಲ್ಲಿ ಬಿಡುಗಡೆ ಮಾಡಿ ವಿನ್ಯಾಸವನ್ನು ಎರಡು (2) ವರ್ಷಗಳೊಳಗೆ ಅಥವಾ ನಗರಾಭಿವೃದ್ಧಿ ಪ್ರಾಧಿಕಾರ/ ಯೋಜನಾ ಪ್ರಾಧಿಕಾರ/ ಸ್ಥಳೀಯ ಸಂಸ್ಥೆಯು ತನ್ನ ವಿವೇಚನೆ ಬಳಸಿ ನಿಗಧಿಪಡಿಸಬಹುದಾದ (ಇಂತಹ ವಿಸ್ತರಣೆಯು ಗರಿಷ್ಠ ಒಂದು ವರ್ಷಕ್ಕೆ ಮೀರದಂತೆ) ಅವಧಿಯೊಳಗೆ ಅಭಿವೃದ್ಧಿಪಡಿಸತಕ್ಕದ್ದು ಎಂಬ ನಿಬಂಧನೆಯನ್ನು ಕಡ್ಡಾಯವಾಗಿ ವಿಧಿಸತಕ್ಕದ್ದು.
- ಮೊದಲನೇ ಹಂತದ ಶೇ.40 ರಷ್ಟು ಬಿಡುಗಡೆ ಮಾಡಿರುವ ನಿವೇಶನಗಳ ಮಾಹಿತಿ ಒಳಗೊಂಡ ವಿನ್ಯಾಸ ನಕ್ಷೆಯ ಪ್ರತಿಯನ್ನು ಪ್ರಾಧಿಕಾರವು ಸಂಬಂಧಿತ ಸ್ಥಳೀಯ ಸಂಸ್ಥೆಗ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸುವುದು. ಹಾಗೂ ಕಾಮಗಾರಿಗಳು ಪ್ರಗತಿಯಲ್ಲಿರುವ ಬಗ್ಗೆ ಪ್ರಾಧಿಕಾರ/ ಸ್ಥಳೀಯ ಸಂಸ್ಥೆಯು ಆಗಿಂದಾಗ್ಗೆ ಪರಿಶೀಲಿಸುತ್ತಾ ನಿಗಾ ವಹಿಸತಕ್ಕದ್ದು.

ಎರಡನೇ ಹಂತ:

- ಅರ್ಜಿದಾರರು ವಿನ್ಯಾಸ ಅಭಿವೃದ್ಧಿ ಕಾರ್ಯಗಳನ್ನು ಲೋಕೋಪಯೋಗಿ ಒಳನಾಡು ಬಂದರು ಮತ್ತು ಜಲಸಾರಿಗೆ ಇಲಾಖೆ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ/ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ವಿದ್ಯುಚ್ಛಕ್ತಿ ಪೂರೈಕೆ ಕಂಪನಿ ಹಾಗೂ ತೋಟಗಾರಿಕೆ ಇಲಾಖೆಗಳು ನಿಗದಿಪಡಿಸುವ ವಿಧಾನದಲ್ಲಿ ಕಾರ್ಯಗತಗೊಳಿಸುವುದು.

- ಸಿವಿಲ್ ಕಾಮಗಾರಿಗಳಾದ ರಸ್ತೆ, ಸಿಡಿ ವರ್ಕ್ಸ್, ರಸ್ತೆಯ ಪಕ್ಕದ ಡ್ರೈನ್ಸ್, ಒಳಚರಂಡಿ ಕಾಮಗಾರಿ, ನೀರು ಸರಬರಾಜು ಕಾಮಗಾರಿಗಳನ್ನು (ಪೈಪ್‌ಲೈನ್‌ಗಳನ್ನು ಒಳಗೊಂಡಂತೆ) ಪೂರ್ಣಗೊಳಿಸಿದ ಬಗ್ಗೆ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿನ ವಿನ್ಯಾಸಗಳಿಗೆ ಸಕ್ಷಮ ಪ್ರಾಧಿಕಾರಗಳಿಂದ ಹಾಗೂ ನಗರ ಪ್ರದೇಶಗಳ ವ್ಯಾಪ್ತಿಯಲ್ಲಿ ಸಂಬಂಧಿತ ಸ್ಥಳೀಯ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು ತಮ್ಮ ಕಛೇರಿಯ ಇಂಜಿನಿಯರಿಂಗ್ ಶಾಖೆಯಿಂದ ದೃಢೀಕರಿಸಿಕೊಂಡು ಸದರಿ ಹಂತದ ಕಾಮಗಾರಿಗಳನ್ನು ತೃಪ್ತಿಕರವಾಗಿ ಕೈಗೊಂಡಿರುವ ಬಗ್ಗೆ ಅಗತ್ಯ ಪ್ರಮಾಣ ಪತ್ರದೊಂದಿಗೆ ಹಾಗೂ ಮೊದಲನೇ ಹಂತದಲ್ಲಿ ಬಿಡುಗಡೆ ಪಡಿಸಿಕೊಂಡಿರುವ ಶೇ.40 ರಷ್ಟು ನಿವೇಶನಗಳನ್ನು ಮಾತ್ರ ಸ್ಥಳೀಯ ಸಂಸ್ಥೆಯಲ್ಲಿ ಖಾತೆ ಹೊಂದಿರುವ ಬಗ್ಗೆ ಪೂರಕ ದಾಖಲಾತಿ ಸಮೇತ ಎರಡನೇ ಹಂತದ ಶೇ.30 ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಕೋರಿ ಮನವಿ ಸಲ್ಲಿಸತಕ್ಕದ್ದು.
- ನಗರಾಭಿವೃದ್ಧಿ ಪ್ರಾಧಿಕಾರ/ ಯೋಜನಾ ಪ್ರಾಧಿಕಾರ/ ಸ್ಥಳೀಯ ಸಂಸ್ಥೆಯು ಸದರಿ ಸಿವಿಲ್ ಕಾಮಗಾರಿಗಳು ಪೂರ್ಣಗೊಂಡಿರುವುದನ್ನು ದೃಢೀಕರಿಸಿ ಸಲ್ಲಿಸಿದ ಪತ್ರದನ್ವಯ ಸಭೆಯಲ್ಲಿ ಮಂಡಿಸಿ ವಿನ್ಯಾಸದಲ್ಲಿ ಉಳಿದಿರುವ ಶೇ:60ರ ನಿವೇಶನಗಳ ಪೈಕಿ ಶೇ.30 ರಷ್ಟು ನಿವೇಶನಗಳನ್ನು ಮಾತ್ರ 2ನೇ ಹಂತದಲ್ಲಿ ನಮೂನೆ–II ರಲ್ಲಿ ಬಿಡುಗಡೆ ಮಾಡತಕ್ಕದ್ದು. ಹಾಗೂ ಕಾಮಗಾರಿಗಳು ಪ್ರಗತಿಯಲ್ಲಿರುವ ಬಗ್ಗೆ ಪ್ರಾಧಿಕಾರ/ ಸ್ಥಳೀಯ ಸಂಸ್ಥೆಯು ಆಗಿಂದಾಗ್ಗೆ ಪರಿಶೀಲಿಸುತ್ತಾ ನಿಗಾ ವಹಿಸತಕ್ಕದ್ದು.

<u>ಅಂತಿಮ ಹಂತ:</u>

- ಮೇಲ್ಕಂಡ ಎರಡೂ ಹಂತಗಳಲ್ಲಿ ನಿವೇಶನಗಳನ್ನು ಬಿಡುಗಡೆಗೊಳಿಸಿದ ನಂತರ ಅಂತಿಮವಾಗಿ ಉಳಿದಿರುವ ಶೇ.30 ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸುವ ಮೊದಲು ವಿನ್ಯಾಸದಲ್ಲಿ/ ಬಡಾವಣೆಯಲ್ಲಿ ಉಳಿದ ಎಲ್ಲಾ ಮೂಲಭೂತ ಸೌಕರ್ಯಗಳಾದ ರಸ್ತೆ ಡಾಂಬರೀಕರಣ, ನೀರು ಸರಬರಾಜು, ವಿದ್ಯುಚ್ಛಕ್ತಿ ಸಂಪರ್ಕ, ಮಳೆ ನೀರು ಸಂಗ್ರಹಣೆ, ಉದ್ಯಾನವನ ಅಭಿವೃದ್ಧಿ, ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ, ಎಸ್.ಟಿ.ಪಿ. ಅಳವಡಿಸುವುದು ಹಾಗೂ ರಸ್ತೆ ಬದಿಗಳಲ್ಲಿ ಮರಗಳನ್ನು ಬೆಳೆಸುವ ಸಂಬಂಧ ಸಸಿಗಳನ್ನು ನೆಟ್ಟು, ಅಗತ್ಯ ಸಂರಕ್ಷಣಾ ತಡೆ ನಿರ್ಮಿಸತಕ್ಕದ್ದು.
- ಅಭಿವೃದ್ಧಿ ಕಾರ್ಯಗಳನ್ನು ಪೂರೈಸಿರುವ ಬಗ್ಗೆ ನಗರ ಪ್ರದೇಶ ವ್ಯಾಪ್ತಿಯಲ್ಲಿ ಸಂಬಂಧಿತ ಸ್ಥಳೀಯ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು ತಮ್ಮ ಕಛೇರಿಯ ಇಂಜಿನಿಯರಿಂಗ್ ಶಾಖೆಯಿಂದ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಂಬಂಧಿತ ಸಕ್ಷಮ ಪ್ರಾಧಿಕಾರಗಳಿಂದ ದೃಢೀಕೃತ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರ ಪಡೆದು ಅರ್ಜಿದಾರರು ಪ್ರಾಧಿಕಾರಕ್ಕೆ ಸಲ್ಲಿಸುವುದು. ಹಾಗೂ ಈ ರೀತಿ ಅಭಿವೃದ್ಧಿಪಡಿಸಿದ ಎಲ್ಲಾ ಮೂಲಭೂತ ಸೌಲಭ್ಯ ಸೇರಿದಂತೆ ರಸ್ತೆಗಳನ್ನು ನಗರಾಭಿವೃದ್ಧಿ ಪ್ರಾಧಿಕಾರ/ ಸ್ಥಳೀಯ ಸಂಸ್ಥೆಗೆ ಪುಕ್ಕಟೆಯಾಗಿ ಅರ್ಜಿದಾರರು / ಅಭಿವೃದ್ಧಿದಾರರು ನೋಂದಾಯಿಸಿ ಕೊಟ್ಟು, ಅಂತಿಮವಾಗಿ ಉಳಿದಿರುವ ಶೇ.30 ರಷ್ಟು ನಿವೇಶನಗಳ ಬಿಡುಗಡೆಗಾಗಿ ಮನವಿ ಸಲ್ಲಿಸತಕ್ಕದ್ದು.

..5

- ನಗರಾಭಿವೃದ್ಧಿ ಪ್ರಾಧಿಕಾರ/ ಯೋಜನಾ ಪ್ರಾಧಿಕಾರ/ ಸ್ಥಳೀಯ ಸಂಸ್ಥೆಯು, ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಪಡಿಸಿದ ಎಲ್ಲಾ ಮೂಲಭೂತ ಸೌಲಭ್ಯಗಳೂ ಸೇರಿದಂತೆ ರಸ್ತೆಗಳನ್ನು ಹಸ್ತಾಂತರಿಸಿಕೊಂಡ ನಂತರ ಎಲ್ಲಾ ಕಾಮಗಾರಿಗಳನ್ನು ಅಭಿವೃದ್ಧಿಪಡಿಸಿರುವ ಬಗ್ಗೆ ತೃಪ್ತಿದಾಯಕವಾಗಿದ್ದಲ್ಲಿ, ಸಭೆಯಲ್ಲಿ ಮಂಡಿಸಿ ಸದರಿ ವಿನ್ಯಾಸದಲ್ಲಿ ಉಳಿದಿರುವ ಶೇ.30 ರಷ್ಟು ನಿವೇಶನಗಳನ್ನು ಅಂತಿಮವಾಗಿ ನಮೂನೆ–III ರಲ್ಲಿ ಬಿಡುಗಡೆ ಮಾಡತಕ್ಕದ್ದು.

<u>ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕಲಂ 17(4) ಮತ್ತು ಕಲಂ 73 ರಡಿಯಲ್ಲಿ ಕ್ರಮ ಕೈಗೊಳ್ಳುವ ಕುರಿತು.</u>

ವಿನ್ಯಾಸ ಅಭಿವೃದ್ಧಿಗಾಗಿ ಪ್ರಾಧಿಕಾರ ನಿಗಧಿಪಡಿಸಿರುವ ಕಾಲಾವಧಿಯೊಳಗೆ ಅರ್ಜಿದಾರರು/ ಅಭಿವೃದ್ಧಿದಾರರು ವಿನ್ಯಾಸವನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಪಡಿಸತಕ್ಕದ್ದು. ತಪ್ಪಿದಲ್ಲಿ ಪ್ರಾಧಿಕಾರವು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಕಲಂ 17(4) ಮತ್ತು ಕಲಂ 73 ರಡಿಯಲ್ಲಿ ನಗರಾಭಿವೃದ್ಧಿ ಪ್ರಾಧಿಕಾರ/ ಯೋಜನಾ ಪ್ರಾಧಿಕಾರ/ ಪುರಸಭೆ ಯೋಜನಾ ಪ್ರಾಧಿಕಾರಗಳು ಕಡ್ಡಾಯವಾಗಿ ಕ್ರಮ ವಹಿಸತಕ್ಕದ್ದು.

(ಟಿ.ಎಂ.ವಾಸುದೇವರಾವ್)
ಸರ್ಕಾರದ ಅಧೀನ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ.

ಪ್ರತಿಗಳನ್ನು ಮಾಹಿತಿಗಾಗಿ :

1. ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ಬೆಂಗಳೂರು.
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಕಳುಹಿಸುತ್ತಾ, ಅವರವರ ವ್ಯಾಪ್ತಿಯ ಗ್ರಾಮೀಣ ಸ್ಥಳೀಯ ಸಂಸ್ಥೆಯಾದ ಗ್ರಾಮ ಪಂಚಾಯತಿಗಳಿಗೆ ಈ ಬಗ್ಗೆ ಮಾಹಿತಿ ನೀಡಲು ಕೋರಿದೆ.
3. ಆಯುಕ್ತರು, ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು.
4. ಸದಸ್ಯ ಕಾರ್ಯದರ್ಶಿಗಳು, ಎಲ್ಲಾ ನಗರ ಯೋಜನಾ ಪ್ರಾಧಿಕಾರಗಳು.
5. ಮುಖ್ಯಾಧಿಕಾರಿಗಳು/ಆಯುಕ್ತರು, ಎಲ್ಲಾ ಪುರಸಭೆ/ನಗರಸಭೆ/ಯೋಜನಾ ಪ್ರಾಧಿಕಾರಗಳು.
6. ಕಛೇರಿ ಪ್ರತಿ.

ನಮೂನೆ – I

ನಿವೇಶನಗಳ ಬಿಡುಗಡೆ ಪ್ರಮಾಣ ಪತ್ರ

ಕ್ರ.ಸಂ.---------- --- ನಗರಾಭಿವೃದ್ಧಿ ಪ್ರಾಧಿಕಾರ/ಯೋಜನಾ ಪ್ರಾಧಿಕಾರ/
ನಗರಸಭೆ/ ಪುರಸಭೆ/ ಗ್ರಾಮ ಪಂಚಾಯಿತಿ

ವಿಷಯ:– ..... ತಾಲ್ಲೂಕು, ...
ಹೋಬಳಿ..... ಗ್ರಾಮದ ಸ.ನಂ.....
ಒಟ್ಟು .....ಎಕರೆ .....ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ
ಅನುಮೋದಿತ ವಸತಿ ವಿನ್ಯಾಸದಲ್ಲಿನ ನಿವೇಶನಗಳನ್ನು ಬಿಡುಗಡೆ
ಮಾಡುವ ಬಗ್ಗೆ.

ಉಲ್ಲೇಖ:– 1) ದಿನಾಂಕ:..... ರ ಪ್ರಾಧಿಕಾರದ ..... ನೇ
ಸಭೆಯ ವಿಷಯ ಸಂಖ್ಯೆ :..... ರ ನಿರ್ಣಯ.
2) ಪ್ರಾಧಿಕಾರದಿಂದ ಅನುಮೋದನೆಯಾಗಿರುವ ವಸತಿ ವಿನ್ಯಾಸ ಕ್ರಮ
ಸಂಖ್ಯೆ :..... ದಿನಾಂಕ: .....
3) ಅರ್ಜಿದಾರರು ಬರೆದು ಕೊಟ್ಟಿರುವ ನೋಂದಾಯಿತ ಪರಿತ್ಯಜನ ಪತ್ರ
ದಿನಾಂಕ:.....
4) ಅರ್ಜಿದಾರರು ಶೇ.40 ರಷ್ಟು ನಿವೇಶನಗಳ ಬಿಡುಗಡೆಗಾಗಿ ಸಲ್ಲಿಸಿದ
ಮನವಿ ದಿನಾಂಕ:.....

*****

..... ತಾಲ್ಲೂಕು ..... ಹೋಬಳಿ ..... ಗ್ರಾಮದ ಸ.ನಂ. ..... ಒಟ್ಟು .....ಎಕರೆ ..... ಗುಂಟೆ ವಿಸ್ತೀರ್ಣ ಪ್ರದೇಶದ ಬಹುನಿವೇಶನ ವಸತಿ ವಿನ್ಯಾಸ ನಕ್ಷೆಗೆ..... ಪ್ರಾಧಿಕಾರದ ಪತ್ರ ಸಂಖ್ಯೆ..... ದಿನಾಂಕ:..... ರಲ್ಲಿ ಅನುಮೋದನೆಯನ್ನು ನೀಡಲಾಗಿದೆ. ಈ ವಿನ್ಯಾಸದಲ್ಲಿ ಒಟ್ಟು .....ವಿವಿಧ ಅಳತೆಯ ನಿವೇಶನಗಳಿದ್ದು, ಉದ್ಯಾನವನ ಮತ್ತು ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಪ್ರದೇಶವನ್ನು ಭೂಮಿಯ ಮೇಲೆ ಅಳವಡಿಸಿ, ಗಡಿಗಳನ್ನು ಗುರುತಿಸಿ ಬೇಲಿ ನಿರ್ಮಿಸಿ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ನೋಂದಾಯಿತ ಪರಿತ್ಯಜನ ಪತ್ರದ ಮುಖಾಂತರ ಪ್ರಾಧಿಕಾರಕ್ಕೆ ಹಸ್ತಾಂತರಿಸಿ ಅರ್ಜಿದಾರರು ಸದರಿ ಅನುಮೋದಿತ ವಸತಿ ವಿನ್ಯಾತ ನಕ್ಷೆಯಲ್ಲಿನ ಒಟ್ಟು ನಿವೇಶನಗಳ ಪೈಕಿ ಮೊದಲನೇ ಹಂತದ ಶೇ.40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ಸದರಿ ಅನುಮೋದಿತ ವಸತಿ ವಿನ್ಯಾಸದಲ್ಲಿರುವ ಒಟ್ಟು ..... ನಿವೇಶನಗಳ ಪೈಕಿ ಈ ಕೆಳಗೆ ನಮೂದಿಸಿದ ಶೇ.40 ರಷ್ಟು ನಿವೇಶನಗಳನ್ನು ಮೊದಲನೇ ಹಂತದಲ್ಲಿ ಬಿಡುಗಡೆ ಮಾಡಲಾಗಿದೆ.

..2

ಮೊದಲನೇ ಹಂತದ ಶೇ.40 ರಷ್ಟು ಒಳಗೊಂಡ ನಿವೇಶನಗಳು :

ಕ್ರಮ ಸಂಖ್ಯೆ	ಅಳತೆ	ನಿವೇಶನಗಳ ಸಂಖ್ಯೆ	ಒಟ್ಟು

ಆಯುಕ್ತರು

---------- ನಗರಾಭಿವೃದ್ಧಿ ಪ್ರಾಧಿಕಾರ/ ಸದಸ್ಯ ಕಾರ್ಯದರ್ಶಿ

---------- ಯೋಜನಾ ಪ್ರಾಧಿಕಾರ/ ಮುಖ್ಯಾಧಿಕಾರಿಗಳು ---------- ಪುರ/ನಗರಸಭೆ/ ಅಭಿವೃದ್ಧಿ ಅಧಿಕಾರಿ/ ಕಾರ್ಯದರ್ಶಿ ----------

--- ಗ್ರಾಮ ಪಂಚಾಯಿತಿ

ಪ್ರತಿಯನ್ನು:-

1) ಅರ್ಜಿದಾರರು/ ಅಭಿವೃದ್ಧಿದಾರರು ..... ಮುಂದಿನ ಕ್ರಮಕ್ಕಾಗಿ.

2) ಆಯುಕ್ತರು, ...ನಗರಸಭೆ/ ಮುಖ್ಯಾಧಿಕಾರಿಗಳು .....ಪುರಸಭೆ/ ಪಟ್ಟಣ ಪಂಚಾಯಿತಿ. ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ..... ಗ್ರಾಮ ಪಂಚಾಯ್ತಿ.

ನಮೂನೆ – II

ನಿವೇಶನಗಳ ಬಿಡುಗಡೆ ಪ್ರಮಾಣ ಪತ್ರ

ಕ್ರ.ಸಂ..... .....ನಗರಾಭಿವೃದ್ಧಿ ಪ್ರಾಧಿಕಾರ/ಯೋಜನಾ ಪ್ರಾಧಿಕಾರ/ ನಗರಸಭೆ/ ಪುರಸಭೆ/ ಗ್ರಾಮ ಪಂಚಾಯಿತಿ

ವಿಷಯ: ..... ತಾಲ್ಲೂಕು,

.....ಹೋಬಳಿ ..... ಗ್ರಾಮದ ಸ.ನಂ :

..... ಗ್ರಾಮದ ಸ.ನಂ: ..... ಒಟ್ಟು

..... ಎಕರೆ ..... ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ ಅನುಮೋದಿತ ವಿನ್ಯಾಸದಲ್ಲಿನ ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: 1) ಪ್ರಾಧಿಕಾರದಿಂದ ಅನುಮೋದನೆಯಾಗಿರುವ ವಸತಿ ವಿನ್ಯಾಸ ಕ್ರಮ ಸಂಖ್ಯೆ:..... ದಿನಾಂಕ .....

2) ಅರ್ಜಿದಾರರು ಬರೆದುಕೊಟ್ಟಿರುವ ನೋಂದಾಯಿತ ಪರಿತ್ಯಾಜನ ಪತ್ರ ದಿನಾಂಕ:.....

3) ಮೊದಲನೇ ಹಂತದಲ್ಲಿ ಜಮೀನು ಬಿಡುಗಡೆ ಮಾಡಿದ ಪ್ರಮಾಣ ಪತ್ರ (ನಮೂನೆ–1) ರ ಸಂಖ್ಯೆ.....ದಿನಾಂಕ.....

4) ಎರಡನೇ ಹಂತದಲ್ಲಿ ಸಿವಿಲ್ ಕಾಮಗಾರಿ ಪೂರೈಸಿದ ಬಗ್ಗೆ ಸ್ಥಳೀಯ ಸಂಸ್ಥೆಯಿಂದ ನೀಡಿದ ದೃಢೀಕರಣ ಪತ್ರ(ಗಳ) ಸಂಖ್ಯೆ:.....ದಿನಾಂಕ.....

5) ಅರ್ಜಿದಾರರ ಎರಡನೇ ಹಂತದ ಶೇ.30 ರಷ್ಟು ನಿವೇಶನಗಳ ಬಿಡುಗಡೆಗಾಗಿ ಸಲ್ಲಿಸಿದ ಮನವಿ ದಿನಾಂಕ: .....

*****

..... ತಾಲ್ಲೂಕು, ... ಹೋಬಳಿ, ... ಗ್ರಾಮದ ಸ.ನಂ : ..... ಒಟ್ಟು ..... ಎಕರೆ..... ಗುಂಟೆ ವಿಸ್ತೀರ್ಣ ಪ್ರದೇಶದ ಬಹು ನಿವೇಶನ ವಸತಿ ವಿನ್ಯಾಸ ನಕ್ಷೆಗೆ..... ಯೋಜನಾ ಪ್ರಾಧಿಕಾರದ ಪತ್ರ ಸಂಖ್ಯೆ ....ದಿನಾಂಕ:.....ರಲ್ಲಿ ಅನುಮೋದನೆಯನ್ನು ನೀಡಲಾಗಿದೆ. ಈ ವಿನ್ಯಾಸದಲ್ಲಿ ಒಟ್ಟು..... ವಿವಿಧ ಅಳತೆಯ ನಿವೇಶನಗಳಿದ್ದು, ಉಲ್ಲೇಖ (3) ರ ಪ್ರಮಾಣ ಪತ್ರದಲ್ಲಿ ಶೇ.40 ರಷ್ಟು ನಿವೇಶನಗಳನ್ನು ಪ್ರಾರಂಭಿಕ ಹಂತದಲ್ಲಿ ಬಿಡುಗಡೆ ಮಾಡಲಾಗಿದ್ದು, ಅರ್ಜಿದಾರರು ಸಿವಿಲ್ ಕಾಮಗಾರಿಗಳಾದ ರಸ್ತೆ, CD Works ರಸ್ತೆ ಪಕ್ಕದ ಚರಂಡಿ, ಒಳಚರಂಡಿ ಕಾಮಗಾರಿ, ನೀರು ಸರಬರಾಜು ಕಾಮಗಾರಿಗಳನ್ನು (ಪೈಪ್ ಲೈನ್‌ಗಳನ್ನು ಒಳಗೊಂಡಂತೆ) ಪೂರ್ಣಗೊಳಿಸಿ, ಈ ಸಂಬಂಧ ಅಗತ್ಯ ದೃಢೀಕರಣ ಪತ್ರಗಳನ್ನು ಸಲ್ಲಿಸಿ ಎರಡನೇ ಹಂತದ ಶೇ.30 ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಮನವಿ ಸಲ್ಲಿಸಿರುತ್ತಾರೆ.

ಪ್ರಾಧಿಕಾರ / ಸ್ಥಳೀಯ ಸಂಸ್ಥೆಯು ಸದರಿ ಸಿವಿಲ್ ಕಾಮಗಾರಿಗಳು ಪೂರ್ಣಗೊಂಡಿರುವುದನ್ನು ದೃಢೀಕರಿಸಿ ಸಲ್ಲಿಸಿದ ಪತ್ರದನ್ವಯ ಸಭೆಯಲ್ಲಿ ಮಂಡಿಸಿ ವಿನ್ಯಾಸದಲ್ಲಿ ಉಳಿದಿರುವ ಶೇ.60ರ ನಿವೇಶನಗಳ ಪೈಕಿ ಶೇ.30 ರಷ್ಟು ನಿವೇಶನಗಳನ್ನು ಮಾತ್ರ ಎರಡನೇ ಹಂತದಲ್ಲಿ ಬಿಡುಗಡೆ ಮಾಡಲಾಗಿದೆ.

ಎರಡನೇ ಹಂತದ ಶೇ.30 ರಷ್ಟು ಒಳಗೊಂಡ ನಿವೇಶನಗಳು

ಕ್ರಮ ಸಂಖ್ಯೆ	ನಿವೇಶನಗಳ ಅಳತೆ	ನಿವೇಶನಗಳ ಸಂಖ್ಯೆ	ಒಟ್ಟು
1.			

ಆಯುಕ್ತರು
---------- ನಗರಾಭಿವೃದ್ಧಿ ಪ್ರಾಧಿಕಾರ/
ಸದಸ್ಯ ಕಾರ್ಯದರ್ಶಿ
---------- ಯೋಜನಾ ಪ್ರಾಧಿಕಾರ/
ಮುಖ್ಯಾಧಿಕಾರಿಗಳು ---------- ಪುರ/ನಗರಸಭೆ/
ಅಭಿವೃದ್ಧಿ ಅಧಿಕಾರಿ/ ಕಾರ್ಯದರ್ಶಿ ----------
--- ಗ್ರಾಮ ಪಂಚಾಯಿತಿ

ಪ್ರತಿಯನ್ನು:-

1) ಅರ್ಜಿದಾರರು/ ಅಭಿವೃದ್ಧಿದಾರರು ..... ಮುಂದಿನ ಕ್ರಮಕ್ಕಾಗಿ.
2) ಆಯುಕ್ತರು, ...ನಗರಸಭೆ/ ಮುಖ್ಯಾಧಿಕಾರಿಗಳು .....ಪುರಸಭೆ/ ~~ಪಟ್ಟಣ ಪಂಚಾಯಿತಿ~~, ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ ..... ಗ್ರಾಮ ಪಂಚಾಯ್ತಿ.

ನಮೂನೆ – III

ನಿವೇಶನಗಳ ಬಿಡುಗಡೆ ಪ್ರಮಾಣ ಪತ್ರ

ಕ್ರ.ಸಂ.---------- ----- ನಗರಾಭಿವೃದ್ಧಿ ಪ್ರಾಧಿಕಾರ/ಯೋಜನಾ ಪ್ರಾಧಿಕಾರ/
ನಗರಸಭೆ/ ಪುರಸಭೆ/ ಗ್ರಾಮ ಪಂಚಾಯಿತಿ

ವಿಷಯಃ– ..... ತಾಲ್ಲೂಕು, ...
ಹೋಬಳಿ..... ಗ್ರಾಮದ ಸ.ನಂ.....
ಒಟ್ಟು .....ಎಕರೆ .....ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ
ಅನುಮೋದಿತ ವಸತಿ ವಿನ್ಯಾಸದಲ್ಲಿನ ನಿವೇಶನಗಳನ್ನು ಬಿಡುಗಡೆ
ಮಾಡುವ ಬಗ್ಗೆ.

ಉಲ್ಲೇಖಃ– 1) ದಿನಾಂಕಃ..... ರ ಪ್ರಾಧಿಕಾರದ ..... ನೇ
ಸಭೆಯ ವಿಷಯ ಸಂಖ್ಯೆ :..... ರ ನಿರ್ಣಯ.
2) ಪ್ರಾಧಿಕಾರದಿಂದ ಅನುಮೋದನೆಯಾಗಿರುವ ವಸತಿ ವಿನ್ಯಾಸ ಕ್ರಮ
ಸಂಖ್ಯೆ :..... ದಿನಾಂಕಃ .....
3) ಅರ್ಜಿದಾರರು ಬರೆದು ಕೊಟ್ಟಿರುವ ನೋಂದಾಯಿತ ಪರಿತ್ಯಜನ ಪತ್ರ
ದಿನಾಂಕಃ.....
4) ಮೊದಲನೇ ಹಂತದ ಶೇ.40 ರಷ್ಟು ನಿವೇಶನಗಳನ್ನು ಬಿಡುಗಡೆ
ಮಾಡಿದ ಪ್ರಮಾಣ ಪತ್ರ ಸಂಖ್ಯೆ.....ದಿನಾಂಕಃ.....
5) ಎರಡನೇ ಹಂತದ ಶೇ.30 ನಿವೇಶನಗಳನ್ನು ಬಿಡುಗಡೆ ಪ್ರಮಾಣ ಪತ್ರ
ಸಂಖ್ಯೆ :..... ದಿನಾಂಕಃ.....
6) ಅರ್ಜಿದಾರರು ಅಂತಿಮ ಹಂತದ ಶೇ.30 ರಷ್ಟು ನಿವೇಶನಗಳ
ಬಿಡುಗಡೆಗಾಗಿ ಸಲ್ಲಿಸಿದ ಮನವಿ ದಿನಾಂಕ:.....

*****

..... ತಾಲ್ಲೂಕು ..... ಹೋಬಳಿ
..... ಗ್ರಾಮದ ಸ.ನಂ. ..... ಒಟ್ಟು
.....ಎಕರೆ ..... ಗುಂಟೆ ವಿಸ್ತೀರ್ಣ ಪ್ರದೇಶದ ಬಹುನಿವೇಶನ ವಸತಿ
ವಿನ್ಯಾಸ ನಕ್ಷೆಗೆ..... ಪ್ರಾಧಿಕಾರದ ಪತ್ರ ಸಂಖ್ಯೆ.....
ದಿನಾಂಕಃ..... ರಲ್ಲಿ ಅನುಮೋದನೆಯನ್ನು ನೀಡಲಾಗಿದೆ. ಈ ವಿನ್ಯಾಸದಲ್ಲಿ ಒಟ್ಟು
.....ವಿವಿಧ ಅಳತೆಯ ನಿವೇಶನಗಳಿದ್ದು, ಉಲ್ಲೇಖ (5) ರ ಪ್ರಮಾಣ ಪತ್ರದಲ್ಲಿ
ಶೇ.30 ರಷ್ಟು ನಿವೇಶನಗಳನ್ನು ಎರಡನೇ ಹಂತದಲ್ಲಿ ಬಿಡುಗಡೆ ಮಾಡಲಾಗಿದ್ದು, ಅರ್ಜಿದಾರರು
ಎಲ್ಲಾ ಸಿವಿಲ್ ಕಾಮಗಾರಿಗಳು ಅಂದರೆ, ರಸ್ತೆ ಡಾಂಬರೀಕರಣ ಸೇರಿದಂತೆ ಎಲ್ಲಾ ಮೂಲಭೂತ
ಸೌಕರ್ಯಗಳಾದ, ನೀರು ಸರಬರಾಜು ವಿದ್ಯುಚ್ಛಕ್ತಿ ಸಂಪರ್ಕ, ಮಳೆ ನೀರು ಸಂಗ್ರಹಣೆ,
ಉದ್ಯಾನವನಗಳ ಅಭಿವೃದ್ಧಿ, ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಎಸ್.ಟಿ.ಪಿ. ಅಳವಡಿಕೆ ಹಾಗೂ
ರಸ್ತೆಗಳ ಬದಿಯಲ್ಲಿ ಮರಗಳನ್ನು ಬೆಳೆಸುವ ಸಂಬಂಧ ಸಸಿಗಳನ್ನು ನೆಟ್ಟು, ಸಂರಕ್ಷಣಾ ತಡೆ

ನಿರ್ಮಿಸಿ, ಈ ಬಗ್ಗೆ ಅಗತ್ಯ ದೃಢೀಕರಣ ಪತ್ರಗಳನ್ನು ಸಲ್ಲಿಸಿರುತ್ತಾರೆ. ಹಾಗೂ ಎಲ್ಲಾ ಮೂಲಭೂತ ಸೌಲಭ್ಯ ಸೇರಿದಂತೆ ರಸ್ತೆಗಳನ್ನು ಪ್ರಾಧಿಕಾರಕ್ಕೆ/ ಸ್ಥಳೀಯ ಸಂಸ್ಥೆಗೆ ಉಲ್ಲೇಖ (3)ರನ್ವಯ ಪುಕ್ಕಟೆಯಾಗಿ ನೋಂದಾಯಿಸಿ ಕೊಟ್ಟು ಉಲ್ಲೇಖ (6)ರಲ್ಲಿ ಅಂತಿಮವಾಗಿ ಉಳಿದಿರುವ ಶೇ.30 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲು ಮನವಿ ಮಾಡಿರುತ್ತಾರೆ.

ಪ್ರಾಧಿಕಾರ / ಸ್ಥಳೀಯ ಸಂಸ್ಥೆಯು, ಸದರಿ ಬಾಕಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುವುದನ್ನು ದೃಢೀಕರಿಸಿ ಸಲ್ಲಿಸಿದ ಪತ್ರದನ್ವಯ ಸಭೆಯಲ್ಲಿ ಮಂಡಿಸಿ ವಿನ್ಯಾಸದಲ್ಲಿ ಅಂತಿಮವಾಗಿ ಉಳಿದಿರುವ ಶೇ.30 ರಷ್ಟು ನಿವೇಶನಗಳನ್ನು ಅಂತಿಮವಾಗಿ ಬಿಡುಗಡೆ ಮಾಡಲಾಗಿದೆ.

ಅಂತಿಮವಾಗಿ ಉಳಿದ ಶೇ.30 ರಲ್ಲಿ ಒಳಗೊಂಡಿರುವ ನಿವೇಶನಗಳು :

ಕ್ರಮ ಸಂಖ್ಯೆ	ಅಳತೆ	ನಿವೇಶನಗಳ ಸಂಖ್ಯೆ	ಒಟ್ಟು

ಆಯುಕ್ತರು
---------- ನಗರಾಭಿವೃದ್ಧಿ ಪ್ರಾಧಿಕಾರ/
ಸದಸ್ಯ ಕಾರ್ಯದರ್ಶಿ
---------- ಯೋಜನಾ ಪ್ರಾಧಿಕಾರ/
ಮುಖ್ಯಾಧಿಕಾರಿಗಳು ---------- ಪುರ/ನಗರಸಭೆ/
ಅಭಿವೃದ್ಧಿ ಅಧಿಕಾರಿ/ ಕಾರ್ಯದರ್ಶಿ ----------
--- ಗ್ರಾಮ ಪಂಚಾಯಿತಿ

ಪ್ರತಿಯನ್ನು:–

1) ಅರ್ಜಿದಾರರು/ ಅಭಿವೃದ್ಧಿದಾರರು ..... ಮುಂದಿನ ಕ್ರಮಕ್ಕಾಗಿ.
2) ಆಯುಕ್ತರು, ...ನಗರಸಭೆ/ ಮುಖ್ಯಾಧಿಕಾರಿಗಳು .....ಪುರಸಭೆ/ ಪಟ್ಟಣ ಪಂಚಾಯಿತಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ..... ಗ್ರಾಮ ಪಂಚಾಯಿತಿ.